# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 545 (675) |
| ಉತ್ತರಿಸಬೇಕಾದ ದಿನಾಂಕ | : | 13.12.2024 |
| ಉತ್ತರಿಸುವವರು | : | ಮಾನ್ಯ ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ. | ವಿಷಯ | ಉತ್ತರ |
|---|---|---|
| ಅ) | ಭಾರತ ಸ್ವಾತಂತ್ರ್ಯ ನಂತರ ಮದ್ರಾಸು ರಾಜ್ಯ ಅಸ್ತಿತ್ವದಲ್ಲಿದ್ದು ಕರ್ನಾಟಕದ ವಿವಿಧ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿದ್ದ ಸಮುದಾಯಗಳ ಹೆಸರುಗಳು ಯಾವುವು; ನಂತರ ಭಾಷಾವಾರು ಪ್ರಾಂತ್ಯಗಳ ಏಕೀಕರಣವಾಗಿ ಮೈಸೂರು ರಾಜ್ಯವಾದಾಗ ರಚಿಸಿದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿದ್ದ ಸಮುದಾಯಗಳ ಹೆಸರುಗಳು ಯಾವುವು; | ಭಾರತ ಸರ್ಕಾರದ THE CONSTITUTION (SCHEDULED CASTES) ORDER 1950 Dated: 10.08.1950 ರಲ್ಲಿ 6 ಸಮುದಾಯಗಳನ್ನು ಮೈಸೂರು ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ - ಆದಿ ದ್ರಾವಿಡ, ಆದಿ ಕರ್ನಾಟಕ, ಬಂಜಾರ ಅಥವಾ ಲಂಬಾಣಿ, ಭೋವಿ, ಕೊರಚ ಮತ್ತು ಕೊರಮ.<br><br>ಭಾಷಾವಾರು ಪ್ರಾಂತ್ಯಗಳ ಏಕೀಕರಣವಾಗಿ ಮೈಸೂರು ರಾಜ್ಯವಾದಾಗ ಭಾರತ ಸರ್ಕಾರದ THE CONSTITUTION (SCHEDULED CASTES) (AMENDMENT) ORDER 1956 Dated: 29.10.1956 ರಲ್ಲಿ ಪ್ರದೇಶ ನಿರ್ಬಂಧದೊಂದಿಗೆ ವಿವಿಧ ಜಿಲ್ಲೆಗಳಲ್ಲಿ 101 ಜಾತಿಗಳನ್ನು ಮೈಸೂರು ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ನಂತರ 1977 ರಲ್ಲಿ ಪ್ರದೇಶ ನಿರ್ಬಂಧವನ್ನು ತೆಗೆದುಹಾಕಲಾಗಿದೆ. 101 ಜಾತಿಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಸದರಿ ಜಾತಿ ಪಟ್ಟಿಯು ಪ್ರಸ್ತುತ ಜಾರಿಯಲ್ಲಿರುತ್ತದೆ. |
| ಆ). | ಪ್ರಸ್ತುತ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಪರಿಶಿಷ್ಟ ಪಟ್ಟಿಯಲ್ಲಿ ಸೇರಿರುವ ಸಮುದಾಯಗಳು ಯಾವುವು; ಮದ್ರಾಸು ರಾಜ್ಯ, ಮೈಸೂರು ರಾಜ್ಯ ಹಾಗೂ ಪ್ರಸ್ತುತ ಕರ್ನಾಟಕದ ಪ್ರದೇಶಗಳಲ್ಲಿ ಈ ಮೂರೂ ಪರಿಶಿಷ್ಟ ಜಾತಿ ಪಟ್ಟಿಗಳಲ್ಲಿ ವ್ಯತ್ಯಾಸವಿದೆಯೇ; ಪ್ರಸ್ತುತ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬಿಟ್ಟು ಹೋದ ರಾಜ್ಯದ ಸಮುದಾಯಗಳು ಯಾವುವು; ಮತ್ತು ಅದಕ್ಕೆ ಕಾರಣಗಳೇನು; | |
| ಇ) | ಇಲ್ಲಿಯವರೆಗೆ ಎಷ್ಟು ಸಮುದಾಯಗಳನ್ನು ಹೊಸದಾಗಿ ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲಾಗಿದೆ; ಈ ಸೇರ್ಪಡೆಗೆ ಪರಿಗಣಿಸಿದ ದಾಖಲೆಗಳು ಯಾವುವು; | ಹೊಸದಾಗಿ ಯಾವುದೇ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಿರುವುದಿಲ್ಲ. ಆದರೆ, ಮೂಲ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಕೆಲವು ಪರಿಶಿಷ್ಟ ಜಾತಿಗಳ ಸಮಾನಂತರ ಪದಗಳನ್ನು ಆ ಪಟ್ಟಿಯಲ್ಲಿ ಸೇರಿಸಲಾಗಿದೆ.<br>ಮಾದಿಗ ದಾಸರಿ ಸಮುದಾಯದ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ ವರದಿ ಸ್ವೀಕೃತವಾಗಿದೆ. ಸದರಿ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ. |
| ಈ) | ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಸಮುದಾಯಗಳ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ ನಡೆಸಿ ವರದಿಯನ್ನು ಸರಕಾರದ ಮಟ್ಟದಲ್ಲಿ ಸ್ವೀಕರಿಸಲಾಗಿದೆ: ಈ ವರದಿಗಳಿಗಾಗಿ ಸರಕಾರ ವ್ಯಯಿಸಿದ ಮೊತ್ತವೆಷ್ಟು; ಸಾಕಷ್ಟು ಮೊತ್ತ ವ್ಯಯಿಸಿದ ನಂತರವೂ ಈ ವರದಿಗಳ ಮೇಲೆ ಏನೂ ಕ್ರಮವಹಿಸದಿರಲು ಕಾರಣವೇನು: ಯಾವಾಗ ಈ ಬಗ್ಗೆ ಕ್ರಮ ವಹಿಸಲಾಗುವುದು? | |

**ಸಕಇ 5 ಆರ್ ಐ 2024**

**(ಡಾ. ಹೆಚ್.ಸಿ ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.